(4) ಸಣ್ಣ ಪ್ರಮಾಣದ ರೈತರು ಸಾಲ ಪಡೆಯುವಾಗ ರಿಜಿಸ್ಟ್ರೇಷನ್ ಮಾಡಿಸುವುದರಿಂದ ಉಂಟಾಗುವ ತೊಂದರೆ.

ಸದಸ್ಯರು.—ಶ್ರೀ ಎಂ. ಶಿವಣ್ಣ (ಹೆಚ್. ಡಿ. ಕೋಟೆ).—ಅಧ್ಯಕ್ಷರೆ, ರಾಜ್ಯದಲ್ಲಿನ ಸಣ್ಣ ಹಾಗೂ ಮಧ್ಯಮ ಪ್ರಮಾಣದ ರೈತರಿಗೆ ರಾಷ್ಟ್ರೀಕೃತ ಬ್ಯಾಂಕುಗಳಿಂದ ೧೦ ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಅಲ್ಪ ಕಾಲಾವಧಿ ಬೆಳೆ ಸಾಲ ಪಡೆದುಕೊಳ್ಳುವ ಸಂದರ್ಭದಲ್ಲಿ ರಿಜಿಸ್ಟ್ರೇಷನ್ ಕಡ್ಡಾಯವಾಗಿ ಮಾಡಿಸ ಬೇಕೆಂದು ಸರಕಾರ ಸೂಚನೆ ನೀಡಿರುವುದರಿಂದ ರೈತರಿಗೆ ಬಹಳ ತೊಂದರೆಯಾಗುತ್ತಿದ್ದು, ೨೫ ಸಾವಿರ ರೂಪಾಯಿಗಳವರೆಗೆ ರಿಜಿಸ್ಟ್ರೇಷನ್ ಮಾಡಿಸುವುದನ್ನು ಕೈಬಿಟ್ಟಲ್ಲಿ ರೈತರಿಗೆ ಅನುಕೂಲವಾಗುವುದರಿಂದ ಮೇಲ್ಕಂಡ ರಿಜಿಸ್ಟ್ರೇಷನ್ ಮಾಡಿಸಬೇಕೆಂಬ ಸರಕಾರದ ಸೂಚನೆಯನ್ನು ಕೈಬಿಡಬೇಕೆಂದು ಸರಕಾರ ವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಸಹಕಾರ ಮಂತ್ರಿಯವರ ಪರವಾಗಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ರಿಜಿಸ್ಟ್ರೇಷನ್ ಶುಲ್ಕವನ್ನು ಕಡಿಮೆ ಮಾಡಿ ಎಂದು ಹೇಳಿದ್ದಾರೆ. ಅದು ಸಾಧ್ಯವಾಗುವುದಿಲ್ಲ ಎಂದು ಹೇಳಬಯಸುತ್ತೇನೆ.

ಶ್ರೀ ಎಂ. ಶಿವಣ್ಣ.—ಅಧ್ಯಕ್ಷರೆ, ನನ್ನ ಪ್ರಶ್ನೆ ಅದಲ್ಲ.....

ಅಧ್ಯಕ್ಷರು.—ತಾವು ಹೊಸಬರು. ಇಲ್ಲಿ ಉಳಿದ ವಿವರಗಳನ್ನು ಕೇಳುವ ಬದಲು ಸಂಬಂಧಪಟ್ಟ ಸಚಿವರ ಹತ್ತಿರ ಹೋಗಿ ಕೇಳಿ ವಿವರಗಳನ್ನು ಪಡೆದುಕೊಳ್ಳಬಹುದು.

(5) ಮೈಸೂರು ನಗರದ ಖಾಸಗಿ ಶಾಲಾ ಉಪಾಧ್ಯಾಯರುಗಳಿಗೆ ತಡೆಹಿಡಿದಿರುವ ಸಂಬಳ ನೀಡುವ ಬಗ್ಗೆ.

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಅಧ್ಯಕ್ಷರೇ, ಮೈಸೂರು ನಗರದಲ್ಲಿ ಸುಮಾರು ೩೫ ವರ್ಷ ಗಳಿಂದ ನಡೆಯುತ್ತಿರುವ ಖಾಸಗಿ ಶಾಲೆಗಳಲ್ಲಿ ೧೧:೪೦ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಬಲವಿದ್ದು ಒಬ್ಬ ಉಪಾಧ್ಯಾಯರಿಗೆ ಅನುಮತಿ ನೀಡಲಾಗಿತ್ತು. ೧-೪-೧೯೪೧ ರಿಂದ ೧:೫೦ ಬಲವಿರಬೇಕೆಂದು ಆದೇಶ ಹೊರಡಿಸಿ ಇಲಾಖೆಯು ೮-೯ ವರ್ಷಗಳಿಂದ ಕೆಲಸ ಮಾಡುತ್ತಿರುವ ಶಿಕ್ಷಕ ಶಿಕ್ಷಕಿಯರಿಗೆ ವೇತನ ತಡೆ ಹಿಡಿದಿರುವುದಲ್ಲದೆ ಸಂಬಳದ ಬಾಕಿಯನ್ನು ಸಹ ಕೊಡಬೇಕೆಂದು ನಿರ್ದೇಶನವಿತ್ತಿದೆ. ಇದರಿಂದ ಕನ್ನಡ ಶಾಲೆಗಳಲ್ಲಿ ದುಡಿಯುತ್ತಿರುವ ಶಿಕ್ಷಕ-ಶಿಕ್ಷಕಿಯರಿಗೆ ಸಿಡಿಲು ಬಡಿದಂತಾಗಿದೆ. ಇಲಾಖೆಯು ಕಣ್ಣುಮುಚ್ಚಿ ಪ್ರಭಾವಕ್ಕೆ ಒಳಗಾಗಿ ಅಕ್ಕಪಕ್ಕಗಳಲ್ಲಿ ಹೊಸ ಶಾಲೆಗಳನ್ನು ತೆರೆಯಲು ಅನುಮತಿಯನ್ನು ನೀಡಿ ೧:೫೦ ವಿದ್ಯಾರ್ಥಿ ವಿದ್ಯಾರ್ಥಿನಿಯರ ಬಲವನ್ನು ಒತ್ತಾಯಿಸುವುದರಲ್ಲಿ ಎಳ್ಳಷ್ಟೂ ಅರ್ಥವಿಲ್ಲ ವೆಂದು ಹೇಳಬೇಕಾಗಿದೆ. ಆದ್ದರಿಂದ ಸುಮಾರು ೩೫-೪೦ ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಈ ಕನ್ನಡ ಶಾಲೆಗಳಲ್ಲಿ ೮-೯ ವರ್ಷಗಳಿಂದ ದುಡಿಯುತ್ತಿರುವ ಅಧ್ಯಾಪಕ ಅಧ್ಯಾಪಕಿಯರಿಗೆ ಕೂಡಲೇ ರಕ್ಷಣೆ ನನ್ನು ನೀಡುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಆದ್ದರಿಂದ ವಿದ್ಯಾ ಸಚಿವರು ಇದರ ಬಗ್ಗೆ ಇಲಾಖೆಗೆ ಆದೇಶ ನೀಡಿ ಶಿಕ್ಷಕ-ಶಿಕ್ಷಕಿಯರಿಗೆ ತಡೆಹಿಡಿದಿರುವ ಸಂಬಳದ ಪಾವತಿ ಮಾಡಿಸಲು ನಿರ್ದೇಶನ ನೀಡಬೇಕೆಂದು ಹಾಗೂ ಈಗ ಕೈಗೊಂಡಿರುವ ಕ್ರಮಗಳ ಬಗ್ಗೆ ಸಂಬಂಧಪಟ್ಟ ಸಚಿವರ ಗಮನ ವನ್ನು ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ವಿದ್ಯಾ ಸಚಿವರ ಪರವಾಗಿ).—ಮಾನ್ಯ ವಿದ್ಯಾ ಸಚಿವರು ಸದನದಲ್ಲಿ ಹಾಜರಿಲ್ಲ. ಮಾನ್ಯ ಸದಸ್ಯರಿಗೆ ಉತ್ತರವನ್ನು ತರಿಸಿಕೊಡುವ ವ್ಯವಸ್ಥೆಯನ್ನು ಮಾಡುತ್ತೇನೆ.

(6) ಮೈಸೂರು ಕೈಗಾರಿಕಾಭಿವೃದ್ಧಿ ಮಂಡಳಿ ಮತ್ತು 'ಬೆನಗಾ' ಕಾರ್ಖಾನೆ ಮಧ್ಯೆ ಆಗಿರುವ ಒಪ್ಪಂದದ ಉಲ್ಲಂಘನೆ.

ಶ್ರೀ ಎಸ್. ಹೆಚ್. ಗೌಡ.—ಮಾನ್ಯ ಅಧ್ಯಕ್ಷರೇ, ಸುಮಾರು ೧೦ ವರ್ಷಗಳ ಹಿಂದೆ "ಮೈಸೂರು ಇಂಡಸ್ಟ್ರೀಯಲ್ ಡೆವಲಪ್‌ಮೆಂಟ್ ಬೋರ್ಡಿನವರು ಆಂದಿನ ಕರ್ನಾಟಕ ಸರ್ಕಾರದ ಸಹಕಾರದಿಂದ ಉತ್ತರ ಕನ್ನಡ ಜಿಲ್ಲೆಯ ಸಿದ್ದೇಶ್ವರ ಹೀರೇಗುತ್ತಿ, ಮಾರ್ಬಾ ಮುಂತಾದ ಹಳ್ಳಿಗಳಿಗೆ ಸಂಬಂಧಿಸಿದ

ರೈತರಿಂದ ಸುಮಾರು ೨,೦೦೦ ಎಕರೆ ಗಜನಿ ಭೂಮಿಯನ್ನು ವಶಪಡಿಸಿಕೊಂಡು ಉತ್ತರ ಕನ್ನಡ ಜಿಲ್ಲೆಯ ಬೆಣಗಾದಲ್ಲಿ ಸ್ಥಾಪಿತವಾದ ಕಾಸ್ಟಿಕ್ ಸೋಡಾ ಫ್ಯಾಕ್ಟರಿಗೆ ಅಗತ್ಯವಿರುವ ಉಪ್ಪನ್ನು ತಯಾರಿಸಿಕೊಳ್ಳುವ ಕರಾರಿನ ಮೇಲೆ ಕೊಡಿಸಲಾಗಿತ್ತು. ಆದರೆ ಬೆಣಗಾದಲ್ಲಿ ಕ್ಯಾಸ್ಟಿಕ್ ಸೋಡಾ ಫ್ಯಾಕ್ಟರಿಗೆ ಉಪಯೋಗವಾಗುವ ಗುಣ ಮಟ್ಟದ ಉಪ್ಪನ್ನು ತಯಾರಿಸಲು ಸಾಧ್ಯವಾಗದೆ ಸದರಿ ಗಜನಿ ಭೂಮಿಯ ಕೆಲವೊಂದು ಕ್ಷೇತ್ರದಲ್ಲಿ ಮಾತ್ರ ತಿನ್ನುವ ಉಪ್ಪನ್ನು ತಯಾರಿಸಿ ಅದನ್ನು ಮಾರಾಟ ಮಾಡಲಾಗುತ್ತಿದೆ. ಇದು ಮೈಸೂರು ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಬೋರ್ಡ್ ಮತ್ತು ಬಿಣಗಾ ಕಾಸ್ಟಿಕ್ ಸೋಡಾ ಫ್ಯಾಕ್ಟರಿ ಇವರ ನಡುವೆ ನಡೆದ ಕರಾರಿನ ಸ್ಪಷ್ಟ ಉಲ್ಲಂಘನೆಯಾಗಿದೆ. ತಮ್ಮಿಂದ ವಶಪಡಿಸಿಕೊಂಡ ಭೂಮಿಯನ್ನು ನಿಶ್ಚಿತ ಉದ್ದೇಶಕ್ಕೆ ಬಳಸಿಕೊಳ್ಳದೆ ಬಹುಪಾಲು ಭೂಮಿಯನ್ನು ವ್ಯರ್ಥವಾಗಿ ಹಾಳುಗೆಡವಿರುವುದನ್ನು ನಿತ್ಯವೂ ನೋಡುತ್ತಿರುವ ರೈತರ ಹೊಟ್ಟೆ ಉರಿಯುವಂತಾಗಿದೆ. ಆದ್ದರಿಂದ ಆಲ್ಲಿಯ ರೈತರಿಂದ ವಶಪಡಿಸಿಕೊಂಡ ಭೂಮಿ ವ್ಯರ್ಥವಾಗಿ ಹಾಳಾಗದಂತೆ ಏನಾದರೊಂದು ವ್ಯವಸ್ಥೆ ಮಾಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ, ಲಕ್ಷ್ಮೀಸಾಗರ್ (ಕೈಗಾರಿಕಾ ಸಚಿವರ ಪರವಾಗಿ).—ಅಧ್ಯಕ್ಷರೆ, ಸಂಬಂಧಪಟ್ಟ ಸಚಿವರು ಸದನದಲ್ಲಿ ಇಲ್ಲ. ಮಾನ್ಯ ಸದಸ್ಯರಿಗೆ ವರದಿ ತರಿಸಿ ಉತ್ತರ ಕೊಡುವ ವ್ಯವಸ್ಥೆಯನ್ನು ಮಾಡುತ್ತೇನೆ.

(7) ಹುಬ್ಬಳ್ಳಿ–ಧಾರವಾಡದಲ್ಲಿ ಕಾಲರಾ–ಕರುಳುಬೇನೆ ಕಾಯಿಲೆ ಹರಡಿರುವ ಬಗ್ಗೆ

ಹಿಂಡಸಗೇರಿ ಎ.ಮ್,.—ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ಕರುಳುಬೇನೆ ಹಾಗೂ ಕಾಲರಾ ರೋಗದ ಹಲವಾರು ಪ್ರಕರಣಗಳು ವರದಿಯಾಗಿದ್ದು, ಈ ಬೇನೆಯಿಂದ ಒಬ್ಬರ ಸಾವು ಸಹ ಉಂಟಾಗಿದೆ. ಈವರೆಗೆ ಇದರ ಬಗ್ಗೆ ಸರ್ಕಾರದವರು ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಆದ ಕಾರಣ ಈ ವಿಷಯದ ಬಗ್ಗೆ ಸಭೆಯ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಕಾಲರ ರೋಗದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದಕ್ಕೆ ಸೂಕ್ತಮಂಜಾಗ್ರತೆ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಾನು ತತ್‌ಕ್ಷಣ ನಿರ್ದೇಶನವನ್ನು ಇವತ್ತೇ ಕಳುಹಿಸುತ್ತೇನೆ. ಸಾಮಾನ್ಯವಾಗಿ ಬೇಸಿಗೆಯ ಸಮಯದಲ್ಲಿ ಈ ರೋಗ ಕಾಣಿಸುತ್ತಾ ಇದೆ. ಇದನ್ನು ತಡೆಗಟ್ಟುವುದಕ್ಕೆ ಸೂಕ್ತವಾದ ಕ್ರಮಗಳನ್ನು ಕೂಡಲೇ ತೆಗೆದುಕೊಳ್ಳಬೇಕೆಂದು ಹುಬ್ಬಳ್ಳಿ–ಧಾರವಾಡ ಮಹಾ ನಗರಪಾಲಿಕೆಯವರಿಗೆ ಆದೇಶ ಕೊಡುತ್ತೇನೆ.

೮ ಗುಲ್ಬರ್ಗ ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ವಿದ್ಯಾರ್ಥಿಗಳ ಮುಷ್ಕರ

ಶ್ರೀ ಬಿ. ಸ್ವಾಮಿರಾವ್.—ಗುಲ್ಬರ್ಗಾ ಯೂನಿವರ್ಸಿಟಿ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಒಂದನೇ ಮತ್ತು ಎರಡನೆ ವರ್ಷದ ವಿದ್ಯಾರ್ಥಿಗಳು ೧೩ ವಿಷಯಗಳಲ್ಲಿ ಉತ್ತೀರ್ಣರಾದರೆ ಮುಂದಿನ ವರ್ಷಕ್ಕೆ ಪ್ರವೇಶಿಸಲು ಅರ್ಹರೆಂದು ಘೋಷಿಸಬೇಕೆಂದು ಕೇಳಿಕೊಂಡು ಅನಿರ್ದಿಷ್ಟ ಕಾಲ ಉಪವಾಸದಲ್ಲಿದ್ದು ಇದೀಗ ೧೯ ದಿನಗಳಾದರೂ ಅವರ ಕೇಳಿಕೆ ಈಡೇರಿಸಲಾಗಿರುವುದಿಲ್ಲ. ಉಪವಾಸದಲ್ಲಿರುವ ಕೆಲವು ವಿದ್ಯಾರ್ಥಿಗಳ ಸ್ಥಿತಿಯು ಚಿಂತಾಜನಕವಾಗಿದ್ದು ಪರಿಸ್ಥಿತಿಯು ಗಂಭೀರವಾಗಿದೆ. ಈ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸಲಿಚ್ಛಿಸುತ್ತೇನೆ.

ಶ್ರೀ ಎಂ. ರಘುಪತಿ.—ಇಂಜಿನಿಯರಿಂಗ್ ತರಗತಿಯ ಬಗ್ಗೆ ಮಾನ್ಯ ಬಿ. ಸ್ವಾಮಿರಾವ್‌ರವರು ಒಂದು ಪ್ರಶ್ನೆಯನ್ನು ಕೇಳಿದ್ದಾರೆ. ಈ ಎರಡು ಕೋರ್ಸ್‌ಗಳ ಬಗ್ಗೆ ನಾವು ಯಾವಾಗಲೂ ಬಹಳ ಎಚ್ಚರಿಕೆಯಿಂದ ವಿಚಾರ ಮಾಡಿ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕೋರ್ಸ್ ಈ ಎರಡು ಬಹಳ ಪ್ರಮುಖವಾದುದು. ಇದು ಜನಜೀವನಕ್ಕೆ ಸಂಬಂಧಪಟ್ಟದ್ದು. ಈಗಾಗಲೇ ಈ ಕೋರ್ಸ್‌ನಲ್ಲಿ ಗುಣಮಟ್ಟ ಕಡಿಮೆಯಾಗಿದೆಯೆಂದು ಹೇಳುತ್ತಾರೆ. ಧರ್ಮಸಿಂಗ್‌ರವರೇ ಪೂರ್ತಿಯಾಗಿ ಕೇಳಿ, ಇದರ ಬಗ್ಗೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ಇದರ ಗುಣಮಟ್ಟ ಕಡಿಮೆಯಾಗಬಾರದೆಂಬ ಎನ್ನುವುದೇ ನನ್ನ ಉದ್ದೇಶ. ಪ್ರತಿಯೊಂದಕ್ಕೂ ಆರ್ಡಿನೆನ್ಸ್ ಕೊಟ್ಟು ಕೊಂಡು ಹೋದರೆ ಇಂಜನಿಯರಿಂಗ್ ಮತ್ತು ಮೆಡಿಕಲ್‌ನ ಗುಣಮಟ್ಟ ಕಾಪಾಡುವುದಕ್ಕೆ ಆಗುವುದಿಲ್ಲ. ಆದಕಾರಣ ಇದಕ್ಕಾಗಿ ಯಾವ ರಿಯಾಯಿತಿಯನ್ನು ಕೊಡುವುದಕ್ಕಾಗುವುದಿಲ್ಲ. ವಿಶ್ವವಿದ್ಯಾನಿಲಯದವರು ಏನು ನಿರ್ಣಯ ತೆಗೆದುಕೊಳ್ಳುತ್ತಾರೋ ಆ ನಿರ್ಣಯದಲ್ಲಿ ನಾವು ಹಸ್ತಕ್ಷೇಪ ಮಾಡುವುದಿಲ್ಲವೆಂದು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ.